**ಮಕ್ಕಳೇ ಮುನ್ನಡೆಸಿದ ಮಕ್ಕಳ ಹಕ್ಕುಗಳ ಸ್ನೇಹಿ ಅಭಿಯಾನ – ಹೊಸಾಡಿನಲ್ಲೊಂದು ಹೊಸ ಯಾನ**

ಕೊರೋನಾ ಕಾರಣಕ್ಕೆ ಎಲ್ಲರೂ ಹೆಚ್ಚಿನ ಸಮಯವನ್ನು ಮನೆಯಲ್ಲಿಯೇ ಕಳೆಯಬೇಕಾಗಿದ್ದರಿಂದ ಈ ಸಮಯದಲ್ಲಿ ಪ್ರತಿಯೊಬ್ಬರೂ ಹೊರಗಿನ ಪರಿಸರದಿಂದ ನೇರವಾಗಿ ದೂರವೇ ಉಳಿದಿದ್ದರು, ಅದರಲ್ಲೂ ಮುಖ್ಯವಾಗಿ ಮಕ್ಕಳಂತೂ ಹೊರಗಿನ ಆಟ, ತಂಟೆ, ತರಲೆಗಳಿಲ್ಲದೇ, ಮುಚ್ಚಿದ ಶಾಲೆಯು ಆರಂಭವಾಗದೇ, ಆನ್ಲೈನ್ ಶಿಕ್ಷಣದ ಸಮಸ್ಯೆಯಿಂದ ಹೈರಾಣಾಗಿ, ತರಗತಿಯಲ್ಲಿ ಎಲ್ಲರೊಂದಿಗೆ ಬೆರೆತು ಖುಷಿಯಿಂದ ಕಲಿಯುವ, ಕೂಡಿ ಆಡುವ ಸುಖವನ್ನು ಮರೆತೆ ಬಿಟ್ಟಿದ್ದರು ವಂಚಿತರಾಗಿದ್ದರು. ಪ್ರತಿ ಮುಗುವಿನ ಬಾಲ್ಯದ ಒಂದು ವರ್ಷವನ್ನೇ ಕೊರೋನಾ ನುಂಗಿ ಹಾಕಿದ ಪರಿಸ್ಥಿತಿಯನ್ನು ಮನಗಂಡ ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯು 'ಮಕ್ಕಳ ಹಕ್ಕುಗಳ ಸ್ನೇಹಿ ಗ್ರಾಮ ಪಂಚಾಯತ್ ಅಭಿಯಾನ'ವನ್ನು ರೂಪಿಸಿ ಅನುಷ್ಠಾನಕ್ಕೆ ಅಡಿಯಿಟ್ಟಿತು. ಮಕ್ಕಳಿಗೆ ಓದುವ ಆಸಕ್ತಿ ಮೂಡಿಸುವುದು, ಅವರ ಕಲೆ, ಆಸಕ್ತಿ ಸಾಮರ್ಥ್ಯಕ್ಕೆ ಸಾಣೆ ಹಿಡಿಯುವುದು, ಆ ಮೂಲಕ ಅವರ ಕೌಶಲ್ಯಗಳನ್ನು, ಪ್ರತಿಭೆಗಳನ್ನು ಪ್ರದರ್ಶನ ಮಾಡಲು ಗ್ರಾಮ ಪಂಚಾಯತ್ ಗ್ರಂಥಾಲಯವನ್ನು ಸೃಜನಾತ್ಮಕ ಅಥವಾ ಕ್ರಿಯಾತ್ಮಕ ಸ್ಥಳವನ್ನಾಗಿ ಮಾಡುವ 'ಓದುವ ಬೆಳಕು' ಕಾರ್ಯಕ್ರಮವನ್ನು ಇದರಲ್ಲಿ ರೂಪಿಸಿತ್ತು. ಜೊತೆಗೆ ಗ್ರಾಮ ಸಭೆಗಳ ಪೂರ್ವ ಮಕ್ಕಳ ಪ್ರದೇಶವಾರು ಅಥವಾ ವಾರ್ಡ್ ಸಭೆಗಳನ್ನು ನಡೆಸುವುದು, ಆ ಮೂಲಕ ಕೊರೊನಾ ಕಾಲದಲ್ಲೂ ಮಕ್ಕಳ ಭಾಗವಹಿಸುವಿಕೆಗೆ ಒತ್ತು ಕೊಟ್ಟಿತು. ನಂತರ ಆಯಾ ಪ್ರದೇಶಗಳ ಎಲ್ಲ ಮಕ್ಕಳ ವಿಷಯಗಳೊಂದಿಗೆ ಅವರ ಪ್ರತಿನಿಧಿಗಳು ಮಕ್ಕಳ ಗ್ರಾಮ ಸಭೆಯಲ್ಲಿ ಭಾಗವಹಿಸುವುದು. ಹೀಗೆ ಅವರ ಬಗ್ಗೆ ಆಗುವ ತೀರ್ಮಾನಗಳಲ್ಲಿ ಅವರೇ ಭಾಗವಹಿಸಿ ನಿರ್ಣಯಿಸುವ ಮೂಲಕ 'ಮಕ್ಕಳು ಇಂದೇ ಪ್ರಜೆಗಳಾಗಿ' ತಮ್ಮ ಹಕ್ಕನ್ನು ಚಲಾಯಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗಿತ್ತು.

ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯು ಈಗಾಗಲೇ ಮಕ್ಕಳ ಸಹಭಾಗಿತ್ವದಲ್ಲಿ ಮಕ್ಕಳ ರಕ್ಷಣೆ, ಭಾಗವಹಿಸುವಿಕೆಗಾಗಿ ರೂಪಿಸಿದ ಹಲವು ವ್ಯವಸ್ಥೆಗಳ ಬಗ್ಗೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯೊಂದಿಗೆ ವಿವಿಧ ಹಂತಗಳಲ್ಲಿ ಮಾತುಕತೆ ನಡೆಸಿದ್ದು, ಅದರನ್ವಯ ಸರ್ಕಾರಕ್ಕೆ ಅಂತಹ ಎಲ್ಲಾ ವ್ಯವಸ್ಥೆಗಳ ಬಗ್ಗೆ ಶಿಫಾರಸ್ಸು ಮಾಡಲಾಗಿತ್ತು. ಶಿಫಾರಸ್ಸಿನಲ್ಲಿ ಇರುವ ಪ್ರಮುಖ ಅಂಶಗಳನ್ನು ಈ ಅಭಿಯಾನದಲ್ಲಿ ಸೇರಿಸಿದ ಸರ್ಕಾರವು ರಾಜ್ಯಾದ್ಯಂತ  ಅದರ ಅನುಷ್ಠಾನಕ್ಕೆ ಕಾರ್ಯ ಯೋಜನೆಯನ್ನು ರೂಪಿಸಿದೆ. ಇವುಗಳನ್ನು ಉತ್ತಮ ಅವಕಾಶಗಳೆಂಬಂತೆ ಬಳಸಿಕೊಂಡ ಹಲವು ಗ್ರಾಮ ಸರ್ಕಾರಗಳು (ಗ್ರಾಮ ಪಂಚಾಯಿತಿ) ಈ ನಿಟ್ಟಿನಲ್ಲಿ ಮಕ್ಕಳಿಗೆ ತಮ್ಮ ಬದ್ಧತೆಯನ್ನು ಪ್ರದರ್ಶಿಸಿದರು. ಗ್ರಾಮ ಪಂಚಾಯಿತಿಗಳು ಓದುವ ಬೆಳಕು ಕಾರ್ಯಕ್ರಮದ ಅನುಷ್ಠಾನದ ಜೊತೆಗೆ ಮಕ್ಕಳ ವಾರ್ಡ್ ಸಭೆಗಳನ್ನು, ಗ್ರಾಮ ಸಭೆಗಳನ್ನು ನಡೆಸಿ ಮಾದರಿಗಳನ್ನು ಸೃಷ್ಟಿಸಿತು.

**ಚಟುವಟಿಕೆಯಾಧಾರಿತ ಮಕ್ಕಳ ಪ್ರದೇಶವಾರು ಮತ್ತು ವಾರ್ಡ್ ಸಭೆಗಳು** - ಗ್ರಾಮ ಪಂಚಾಯಿತಿಯು ತನ್ನ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿದ್ದ ಅಂಗನವಾಡಿಗಳ ಕಾರ್ಯಕರ್ತರ, ಆಶಾ ಕಾರ್ಯಕರ್ತರ, ಆಯಾ ಶಾಲೆಯ ಶಿಕ್ಷಕರ ಹಾಗೂ ಸಮುದಾಯದ ಸದಸ್ಯರ ಸಹಕಾರವನ್ನು ಪಡೆದು ಮಕ್ಕಳಿರುವ ಅವರವರ ಪ್ರದೇಶದಲ್ಲೇ ಪ್ರದೇಶವಾರು ಸಭೆಗಳು ಹಾಗೂ ವಾರ್ಡ್ ಸಭೆಗಳನ್ನು ನಡೆಸಲಾಯಿತು. ಹೀಗೆ ನಡೆದ 8 ಸಭೆಗಳಲ್ಲಿ ಆಯಾ ಪ್ರದೇಶ/ವಾರ್ಡ್ ನಲ್ಲಿರು ಎಲ್ಲಾ ಮಕ್ಕಳನ್ನು ಇದರಲ್ಲಿ ಒಳಗೊಳ್ಳುವಂತೆ ಮಾಡಿ ಅವರ ಸಕ್ರಿಯ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಂಡಿತು. ಮುಖ್ಯವಾಗಿ

ಹಿಂದುಳಿದ ಪ್ರದೇಶಗಳ, ವಲಸೆ ಸಮುದಾಯ ಹಾಗೂ ದುಡಿಯುವ ಮಕ್ಕಳಿರುವ ಪ್ರದೇಶಗಳಲ್ಲಿ ಅವರಿಗಾಗಿ ಪ್ರದೇಶವಾರು ಮತ್ತು ವಾರ್ಡ್ ಸಭೆಗಳನ್ನು ನಡೆಸಲಾಯಿತು.

ಗ್ರಾಮ ಪಂಚಾಯಿತಿಯು ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ (ನಮ್ಮಭೂಮಿ) ಸಂಸ್ಥೆಯ ಸಹಭಾಗಿತ್ವದಲ್ಲಿ ಪ್ರತಿ ಸಭೆಯನ್ನೂ ವಿವಿಧ ಆಟಗಳು, ಹಾಡು, ಮಕ್ಕಳ ಚಲನಚಿತ್ರಗಳ ಪ್ರದರ್ಶನ, ಚರ್ಚೆ, ಸಂವಾದ, ಕ್ರಾಫ್ಟ್, ಚಿತ್ರಕಲೆ, ಹೀಗೆ ವಿವಿಧ ಚಟುವಟಿಕೆಗಳ ಮೂಲಕ ನಡೆದಿದೆ. ಮಕ್ಕಳು ಎತ್ತಿದ ವಿಷಯಗಳ ಕ್ರೋಢೀಕರಣ ಮಾಡಲಾಯಿತು.

'ಮಕ್ಕಳ ಧನಿ ಪೆಟ್ಟಿಗೆ' ಯನ್ನು ಮಕ್ಕಳು ಗುರುತಿಸಿದ (ಅವರವರ) ಪ್ರದೇಶಗಳಲ್ಲಿ ಸಾಂಕೇತಿಕವಾಗಿ ಹಾಕಲಾಯಿತು. ಮಕ್ಕಳು ಹೇಳಿದ ಎಲ್ಲಾ ಸ್ಥಳಗಳಲ್ಲಿ ಧನಿ ಪಟ್ಟಿಗೆಯನ್ನು ತೆರೆಯಲು ಆಯಾ ಪ್ರದೇಶದಲ್ಲಿ ಮಕ್ಕಳು ಗುರುತಿಸಿದ ಜವಾಬ್ದಾರಿ ವ್ಯಕ್ತಿಗಳನ್ನು ಕರೆದು ಅವರಿಗೆ ಅದರ ಮಹತ್ವ ಮತ್ತು ಅವರ ಜವಾಬ್ದಾರಿಗಳ ಬಗ್ಗೆ ತಿಳಿಸಿ ಗೌರವ ಪೂರ್ವಕವಾಗಿ ಅವರಿಗೆ ಜವಾಬ್ದಾರಿಯನ್ನು ವಹಿಸುವ ನಿಟ್ಟಿನಲ್ಲಿ ಆಯಾ ಪ್ರದೇಶದಲ್ಲಿ ಹಬ್ಬದಂತೆ ಸಂಭ್ರಮದಿಂದ 'ಧನಿ ಪೆಟ್ಟಿಗೆ' ಹಾಕುವ ಯೋಜನೆಯನ್ನು ಮಾಡಿಕೊಂಡಿದ್ದಾರೆ.

**ಹೊಸ ಗ್ರಂಥಾಲಯಕ್ಕೆ ಮುನ್ನುಡಿ:** ಹೊಸಾಡು ಹೊಸ ಗ್ರಾಮ ಪಂಚಾಯಿತಿ ಆಗಿದ್ದರಿಂದ ಗ್ರಾಮ ಪಂಚಾಯಿತಿಗೆ ಗ್ರಂಥಾಲಯ ಇರಲಿಲ್ಲ. ಆದರೆ ಮಕ್ಕಳಿಂದ ಬಂದ ಬೇಡಿಕೆ ಮತ್ತು ಅವರಿಗೆ ಸಕಾರಾತ್ಮಕವಾಗಿ ಪ್ರತಿಕ್ರಿಯೆ ನೀಡಬೇಕೆಂಬ ಉದ್ದೇಶದಿಂದ ಗ್ರಾಮ ಪಂಚಾಯಿತಿಯವರು ಇರುವ ಪಂಚಾಯತ್ ಕಟ್ಟಡದಲ್ಲೇ ಗ್ರಾಮ ಪಂಚಾಯಿತಿ ಗ್ರಂಥಾಲಯ ರೂಪಿಸಲು ಯೋಜನೆ ಮಾಡಿ ಉಡುಪಿ ಜಿಲ್ಲಾ ಪಂಚಾಯತ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯ ಸಹಭಾಗಿತ್ವದಲ್ಲಿ ಯುಎನ್.ಡಿ.ಪಿ.ಯಿಂದ ಒಂದಷ್ಟು ಪುಸ್ತಕಗಳನ್ನು ಪಡೆದುಕೊಂಡು ಗ್ರಾಮ ಪಂಚಾಯತ್ ತನ್ನದೇ ಖರ್ಚಿನಲ್ಲಿ ಬೆಂಗಳೂರಿನಿಂದ ಅದನ್ನು ತರಿಸಿಕೊಂಡು ಗ್ರಂಥಾಲಯದ ಆರಂಭಕ್ಕೆ ಮುನ್ನುಡಿ ಬರೆದೆ ಬಿಟ್ಟಿತು.

**"ಪುಸ್ತಕ ಜೋಳಿಗೆ":** ಇಲ್ಲಿನ ಮಕ್ಕಳೂ ಕೂಡ ಅದು ಪಂಚಾಯತ್ ಗ್ರಂಥಾಲಯವಷ್ಟೇ ಅಲ್ಲ ನಮ್ಮದೇ ಗ್ರಂಥಾಲಯವಾದ್ದರಿಂದ ಇದನ್ನು ನಾವೂ ರೂಪಿಸಬೇಕೆಂದು "ಪುಸ್ತಕ ಜೋಳಿಗೆ" ಕಾರ್ಯಕ್ರಮದ ಮೂಲಕ ತಮ್ಮ ಊರಿನ ಮನೆ ಮನೆಗಳಿಗೆ ಪುಸ್ತಕ ಜೋಳಿಗೆಯನ್ನು ಹಿಡಿದುಕೊಂಡು ಇದರ ಉದ್ದೇಶವನ್ನು ಪ್ರತಿಯೊಬ್ಬರಿಗೂ ವಿವರಿಸುತ್ತ ಸುಮಾರು 125ಕ್ಕೂ ಹೆಚ್ಚು ಪುಸ್ತಕಗಳನ್ನು ಒಟ್ಟುಗೂಡಿಸಿ ಗ್ರಂಥಾಲಯಕ್ಕೆ ನೀಡಿದ್ದಾರೆ.

**ಸಮಸ್ಯಾ/ಬೇಡಿಕೆಯ ಚೀಲ:** ಪುಸ್ತಕ ಜೋಳಿಗೆಯ ಜೊತೆಗೆ ಮಕ್ಕಳು ಗುಂಪು ಗುಂಪಾಗಿ ಸಮಸ್ಯೆ ಅಥವಾ ಬೇಡಿಕೆಯ ಚೀಲವನ್ನು ಹಿಡಿದುಕೊಂಡು ಮನೆ ಮನೆಗಳಿಗೆ ಭೇಟಿ ಮಾಡಿ ಪ್ರದೇಶವಾರು/ವಾರ್ಡ್ ಸಭೆಗಳಿಗೆ ಬರಲು ಆಗದಿದ್ದ ಮಕ್ಕಳೊಂದಿಗೆ ಅವರ ಸಮಸ್ಯೆಗಳು ಅಥವಾ ಬೇಡಿಕೆಗಳ ಬಗ್ಗೆ ಮಾತನಾಡಿ ಅವರ ಬೇಡಿಕೆಯನ್ನು ಚೀಲದಲ್ಲಿ ಸಂಗ್ರಹಿಸಿದರು. ಈ ಸಮಸ್ಯೆಗಳನ್ನು ಎತ್ತುವುದಾಗಿ ಭರವಸೆ ನೀಡಿ ಗ್ರಾಮ ಸಭೆಯಲ್ಲಿ ಭಾಗವಹಿಸುವಂತೆ ಮಾಹಿತಿ ಹಂಚಿಕೊಂಡರು.

**ಮಕ್ಕಳೇ ರೂಪಿಸಿದ ಗ್ರಂಥಾಲಯ - ಗ್ರಂಥಾಲಯದ ಗೋಡೆಗಳಲ್ಲಿ ಮಕ್ಕಳ ಪ್ರತಿಭೆಯ ಅನಾವರಣ::** ಬಂದ ಎಲ್ಲಾ ಪುಸ್ತಕಗಳನ್ನು ಇಟ್ಟುಕೊಂಡು ದಾನಿಗಳಿಂದ ಗ್ರಾಮ ಪಂಚಾಯಿತಿಯವರು ಪಡೆದುಕೊಂಡ ಪುಸ್ತಕ ಇಡುವ ಕಪಾಟಿನಲ್ಲಿ ಮಕ್ಕಳೆ ಖುದ್ದಾಗಿ ಪುಸ್ತಕಗಳನ್ನು ಜೋಡಿಸಿದ್ದಾರೆ. ಗ್ರಂಥಾಲಯದ ಗೋಡೆಗಳಲ್ಲಿ ಮಕ್ಕಳು ಪ್ರದೇಶವಾರು ಹಾಗೂ ವಾರ್ಡ್ ಸಭೆಗಳಲ್ಲಿ ಮಾಡಿದ ಕ್ರಾಫ್ಟ್ ವಸ್ತುಗಳು, ಬಿಡಿಸಿದ ಚಿತ್ರಗಳು, ಅವರ ಆಸಕ್ತಿಯ ಬರಹಗಳು ಮುಂತಾದವುಗಳನ್ನು ಆಯಾ ಪ್ರದೇಶದ ಹೆಸರಿನಲ್ಲಿ ವಾಲ್ ಮ್ಯಾಗಜಿನ್ ಮಾಡಿ ಗ್ರಂಥಾಲಯದ ಗೋಡೆಗಳಲ್ಲಿ ಹಾಕಿದ್ದಾರೆ.

**ಮಕ್ಕಳೇ ಉದ್ಘಾಟಿಸಿದ ಗ್ರಂಥಾಲಯ - ಮಕ್ಕಳೇ ನಡೆಸಿದ ಮಕ್ಕಳ ಗ್ರಾಮ ಸಭೆ:**

ಗ್ರಾಮ ಸಭೆಯ ಆರಂಭದಿಂದ ಕೊನೆಯವರೆಗೂ ಇಡೀ ಗ್ರಾಮ ಸಭೆಯೂ ಮಕ್ಕಳ ಕಲರವದಿಂದಲೇ ತುಂಬಿತ್ತು. ಗ್ರಾಮ ಸಭೆಯು ಮಕ್ಕಳು ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಹೊಸಾಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಮಕ್ಕಳು ಸೇರಿ ಅವರೇ ರೂಪಿಸಿದ ಗ್ರಂಥಾಲಯವನ್ನು ರಿಬ್ಬನ್ ಕತ್ತರಿಸುವ ಮೂಲಕ ಉದ್ಘಾಟಿಸಿ ಸಂಭ್ರಮಿಸಿದರು. ಮಕ್ಕಳು ತಮ್ಮ ಸದಸ್ಯತ್ವದ ಕಾರ್ಡ್ ಗಳನ್ನು ಪಡೆದುಕೊಂಡು ಹಿಗ್ಗಿದರು. ಹಾಡು ಭಾಷಣಗಳನ್ನು ಗ್ರಾಮ ಸಭೆಯಲ್ಲಿ ಮಾಡುವ ಮೂಲಕ ಲವಲವಿಕೆ ತುಂಬಿದರು. ತಮ್ಮ ಪ್ರದೇಶಗಳಲ್ಲಿ ಇರುವ ವಿವಿಧ ಸಮಸ್ಯೆಗಳನ್ನು ಚಿತ್ರಗಳ ಮೂಲಕ ಮ್ಯಾಪಿಂಗ್ ಮಾಡಿ ಪ್ರದರ್ಶಿಸಿದರು, ಮನೆ ಮನೆ ಭೇಟಿಯ ಮೂಲಕ ಸಂಗ್ರಹಿಸಿದ ಮಕ್ಕಳ ವಿಷಯಗಳ 'ಸಮಸ್ಯೆ ಅಥವಾ ಬೇಡಿಕೆ ಚೀಲ'ವನ್ನು ಗ್ರಾಮ ಸಭೆಯಲ್ಲಿ ಎಲ್ಲರ ಎದುರಿಗೆ ಸುರಿದು ಅದರಲ್ಲಿರುವ ವಿಷಯಗಳ ಪರಿಹಾರಕ್ಕೆ ಆಗ್ರಹಿಸಿದರು. ಕಿರು ಪ್ರಹಸನದ ಮೂಲಕ ವಲಸೆ ಸಮುದಾಯದ ದುಡಿಯುವ ಮಕ್ಕಳು ಸಮಸ್ಯೆಗನ್ನು ವಿವರಿಸಿದರು, ಫ್ಲಕಾರ್ಡ್ ಗಳಲ್ಲಿ ಬರೆದುಕೊಂಡು ಬಂದು ಅದನ್ನು ಹಿಡಿದು ಗ್ರಾಮ ಸಭೆಯಲ್ಲಿ ತೋರಿಸಿ, ಒಂದೊಂದೆ ಸಮಸ್ಯೆಯನ್ನು ವಿವರಿಸುತ್ತಾ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಗ್ರಾಮ ಸರ್ಕಾರವನ್ನು ಒತ್ತಾಯಿಸಿದರು. ಹಿಂದುಳಿದ ಪ್ರದೇಶದ ಮಕ್ಕಳು, ದುಡಿಯುವ ಮಕ್ಕಳು ಸೇರಿದಂತೆ ಎಲ್ಲಾ ಪ್ರದೇಶಗಳಿಂದಲೂ ಮಕ್ಕಳ ಪ್ರತಿನಿಧಿಗಳು ಭಾಗವಹಿಸಿದ್ದರು. ಅವರ ವಿಷಯಗಳಿಗೆ ಧನಾತ್ಮಕವಾಗಿ ಪ್ರತಿಕ್ರಿಯೆ ನೀಡಿದ ಗ್ರಾಮ ಪಂಚಾಯಿತಿ ಈ ಇಡೀ ಅಭಿಯಾನದಲ್ಲಿ ಒಂದು ಸರ್ಕಾರವಾಗಿ ಮಕ್ಕಳಿಗೆ ಅಗತ್ಯ ಮತ್ತು ಪೂರಕವಾದ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಮಾಡುವ ಮೂಲಕ ತನ್ನ ವ್ಯಾಪ್ತಿಯ ಎಲ್ಲಾ ಪ್ರಜೆಗಳಿಗೂ ಉತ್ತರದಾಯಿ ಎನ್ನುವುದನ್ನು ನಿರೂಪಿಸಿದೆ. ಮಕ್ಕಳು ಎತ್ತಿರುವ ವಿಷಯಗಳನ್ನು ಇಟ್ಟುಕೊಂಡು ಅವುಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಆರೋಗ್ಯದ ರಕ್ಷಣೆಯ ಕುರಿತ ಮಾಹಿತಿಯನ್ನು

**ಒಂದು ಆಶಾವಾದ:** ಕೊರೊನಾದ ನೇರ ಪರಿಣಾಮಕ್ಕೆ ಒಳಗಾದವರಲ್ಲಿ ಮಕ್ಕಳು ಮತ್ತು ಮಹಿಳೆಯರು ಮೊದಲ ಸಾಲಿನಲ್ಲಿದ್ದಾರೆ. ಅದರಲ್ಲೂ ಮಕ್ಕಳು, ಸಾಮಾಜೀಕರಣದಲ್ಲಿ ಕುಟುಂಬದ ನಂತರದ ಎಲ್ಲಾ ಕೊಂಡಿಗಳು ಒಮ್ಮೆಲೆ ಕಳಚಿದಾಗ ಎಂದೂ ನಿರೀಕ್ಷಿಸಿರದಂತ ವಾತಾವರಣಕ್ಕೆ ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಯಾಯಿತು. ಇದನ್ನು **ಅನುಭವಿಸಿ ನಂತರ ಅದರಿಂದ ಹೊರಬರಬೇಕಾದಾಗ ತನ್ನ ವ್ಯಾಪ್ತಿಯ ಮಕ್ಕಳಿಗೆ ಗ್ರಾಮ ಪಂಚಾಯತ್ ಹೊಸಾಡು ಸರ್ಕಾರದ ಈ ಕಾರ್ಯಕ್ರಮವನ್ನು ತುಂಬಾ ಆಸ್ತೆಯಿಂದ ಮತ್ತು ಜವಾಬ್ದಾರಿಯಿಂದ ನಡೆಸಿದ್ದು ಪ್ರಶಂಸನೀಯ. ನಮ್ಮಭೂಮಿಯ ಸೌಕರ್ಯಕಾರಿಕೆಯನ್ನು ಪಡೆದ ಗ್ರಾಮ ಪಂಚಾಯತ್ ಹೊಸಾಡು ಇಡೀ ಕಾರ್ಯಕ್ರಮವನ್ನು ಅತೀವ ಕಾಳಜಿಯಿಂದ ನಡೆಸಿ, ಯಶಸ್ಸು ಕಂಡಿದೆ. ಗ್ರಂಥಾಲಯವನ್ನು ಸ್ಥಾಪಿಸುವ ಮೊದಲ ಹೆಜ್ಜೆಯನ್ನಿಟ್ಟು ಮುಂದೆಯೂ ಅದನ್ನು ಆಧುನಿಕ ಸೌಲಭ್ಯಗಳೊಂದಿಗೆ, ಡಿಜಿಟಲ್ ರೂಪಕೊಟ್ಟು, ಜೀವನಕ್ಕೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರಕವಾದ ತರಬೇತಿ ನೀಡುವ ವ್ಯವಸ್ಥೆಗಳೊಂದಿಗೆ ಮಾಹಿತಿ ಹಾಗೂ ಜ್ಞಾನ ಕೇಂದ್ರವಾಗಿ ರೂಪಿಸಿ ಅದನ್ನು ಮಕ್ಕಳಿಗೆ ತೆರೆದಿಡಲು ಹಲವು ಯೋಜನಗೆಳನ್ನು ರೂಪಿಸಿಕೊಂಡಿದೆ. ಆದಷ್ಟು ಬೇಗ ಅದು ಕೈಗೂಡಲಿ ಎಂಬ ಆಶಯ.**




ಸುರೇಶ್ ಎಸ್.ಜಿ.

ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಮತ್ತು

ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯ ಕಾರ್ಯಕರ್ತರು

25.02.2021

9686737747